ಸಿ.ಸಿ.ನಂ.686/2014
ಪಿ.ಡಬ್ಲ್ಯೂ: 18
ಸಿ.ಡಬ್ಲ್ಯೂ: 21

ದಿನಾಂಕ: 23-01-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು
ಮುಂದುವರೆದ **ಮುಖ್ಯ ವಿಚಾರಣೆ :** ಸಹಾಯಕ ಸರ್ಕಾರಿ ಅಭಿಯೋಜಕರವರಿಂದ

ಸರ್ಕಾರಿ ಸಹಾಯಕ ಅಭಿಯೋಜಕರು ಹಾಜರಿದ್ದು , ಸಾಕ್ಷಿಯು ಮಂದುವರೆದ ಮುಖ್ಯ ವಿಚಾರಣೆ ಏನು ಇಲ್ಲ ಎಂದು ಹೇಳಿರುತ್ತಾರೆ.

ಪಾಟೀ ಸವಾಲು : ಆರೋಪಿ 1 ಪರ ಕೆ ಎಲ್ ಆರ್ **ವಕೀಲರಿಂದ.**

ನಾನು ಈ ಪ್ರಕರಣದಲ್ಲಿ ಮಹಜರ್ ಮಾಡಿದ ಸ್ಥಳವು ಕೃಷಿ ಸಂಶೋಧನ ಕೇಂದ್ರ ಬಾವಿಕೆರೆಯ ಜಾಗದಲ್ಲಿ ಬರುತ್ತದೆ ಎಂದರೆ ಸರಿ. ಸದರಿ ಜಮೀನು ಕೃಷಿ ಸಂಶೋಧನ ಕೇಂದ್ರ ಬಾವಿಕೆರೆಯ ಸ್ವಾಧೀನದಲ್ಲಿದೆ ಎಂದರೆ ಸರಿ. ಮಹಜರ್ ಕ್ರಮ ಜರುಗಿಸಿರುವ ಕಾಲದಲ್ಲಿ ನಾನು ಛಾಯಚಿತ್ರವನ್ನು ತೆಗೆಸಿರುವುದಿಲ್ಲ. ನಾನು ಘಟನಾ ಸ್ಥಳಕ್ಕೆ ಸಂಬಂಧಪಟ್ಟಂತೆ ನಕ್ಷೆಯನ್ನು ತಯಾರು ಮಾಡಿದ್ದೇನೆ. ಸದರಿ ನಕ್ಷೆಗೆ ಮತ್ತು ಸರ್ವೇ ಇಲಾಖೆಯಲ್ಲಿ ಇರುವ ನಕ್ಷೆಯೂ ಒಂದೇ ಎಂದು ತೋರಿಸಲು ಯಾವುದೇ ದಾಖಲು ಹಾಜರುಪಡಿಸಿದ್ದೀರಾ ಎಂದರೆ ನಾನು ಹಾಜರುಪಡಿಸಿಲ್ಲ ಎಂದು ಸಾಕ್ಷಿಯು ಸಾಕ್ಷ್ಯ ನುಡಿಯುತ್ತಾರೆ. ನಾನು ಘಟನಾ ಸ್ಥಳಕ್ಕೆ ಹೋಗಿಲ್ಲ ಅಲ್ಲಿ ಯಾವುದೇ ಮಹಜರ್ ಕ್ರಮ ಜರುಗಿಸಿಲ್ಲ ಎಂದರೆ ಸರಿಯಲ್ಲ. ನಾನು ಈ ಪ್ರಕರಣದಲ್ಲಿ ಹಾಜರುಪಡಿಸಿರುವ ಸಭಾ ನಡುವಳಿಗೂ ಹಾಗೂ ಘಟನಾ ಸ್ಥಳಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಆರೋಪಿತರ ವಿರುದ್ದ ಸುಳ್ಳು ಪ್ರಕರಣವನ್ನು ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ: ಇರುವುದಿಲ್ಲ.
(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಕೇ. ಸ. ಇ. ಎ. ಒ.

SD/-

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾ.ದಂ.ರವರು,ತರೀಕೆರೆ.